ವಿಶ್ವನಾಥನ ದರ್ಶನಾ ಮಾಡಕೊಂಡು ಆರಾಮ ಇದ್ದೆ. ಮುಗಿಸಿಕೊಂಡು ಇವತ್ತ ತಿರಗಿ ಬೆಂಗಳೂರಿಗೆ ಹೊಂಟೇನಿ. ನನ್ನ ಜೋಡಿ ಕೆಲಸಾ ಮಾಡಾವ್ರ ತಂದಿದು ಇವತ್ತ ಶ್ರಾದ್ಧ ಅದ. ಅದಕ್ಕ ಇಲ್ಲಿ ಕರಕೊಂಡು ಬಂದೆ' ಎಂದು ಕೈ ತೋರಿಸಿದೆ. 'ನಿನ್ನ ನೋಡಿದ್ರ ನಮ್ಮ ಅಚ್ಚುತ ಭಾವಜಿ ನೆನಪು ಬಂದು ಕರುಳು ಕಿತ್ತಿ ಬರ್ತದ ನೋಡಪಾ. ನಿನ್ನ ಗೆಳೆಯಾ... ನಿನ್ನ ವಾರಿಗಿನ. ನಿನ್ನಂಗ ಆರಾಮಾಗಿ ಇರಬೇಕಾಗಿತ್ತು. ಹಂತಾದ್ದು ಸುಳಿಯೊಳಗ ಸಿಕ್ಕಿ ಕಾಣದ ಹೋಗಿಬಿಟ್ಟರು. ಅತ್ತಿಯವರು ಇನ್ನೂ ನೆನಸಿಕೊಂಡು ಅಳ್ತಾರ. ಅವರಿಗೆ ಇನ್ನೂ ಆಶಾ... ಯಾವತ್ತರೆ ಮಗಾ ತಿರಗಿ ಬರ್ತಾನ ಅಂತ ಕಾಯತಾರ. ಇನ್ನೂ ಎಷ್ಟು ವರ್ಷ ಕಾಯೋದು...? ನಲವತ್ತು ವರ್ಷಾಗಿ ಹೋದು. ಜೀವಂತ ಇದ್ದರ ಆವಾಗನ ಬರ್ತಿದ್ರು. ಅದಕ್ಕ ನಾವು ಇವತ್ತ ಅಚ್ಚುತ ಭಾವಜಿದು ಶ್ರಾದ್ಧ ಮಾಡಿಬಿಟ್ವಿ. ಅತ್ತೆವರು 'ಅಚ್ಚುತಂದು ಮಾಡಬ್ಯಾಡ್ರಿ' ಅಂತ ಹೇಳಿದ್ರು. ಖರೆ ಮುಂದ ನಮ್ಮ ಮಕ್ಕಳು ಮರಿಗೆ ಘೋಲೊ ಆಗಬೇಕಲಾ' ಎನ್ನುತ್ತ ಕಣ್ಣಿಗೆ ಸೆರಗೊತ್ತಿಕೊಂಡರು. ಎದೆಯೊಳಗೆ ತಿವಿದಂತಾಗಿ ಅಚ್ಚುತನ ನೆನಪು ಉಕ್ಕಿ ಬಂತು. 'ಹೌದ್ರೀ ವೈನಿ. ಮೋಹನ ಅಣ್ಣಾ ಭಾಳ ಸಂಭಾಯತ. ಧೊಡ್ಡಣ್ಣಾರು ಆವಾಗ ತೀರಕೊಂಡು ಹೋಗಿಬಿಟ್ರು. ನೀವ ಎಲ್ಲಾ ಸುಧಾರಿಸಿ ಸಂಸಾರ ಮೆಟ್ಟಿಗೆ ಹಚ್ಚಿದ್ರಿ' ಎಂದೆ. ಮುಖದ ಮೇಲೆ ಮೂಡಿದ ಅಭಿಮಾನದ ನಗುವಿನೊಂದಿಗೆ 'ಮದವಿ ಮಾಡಕೊಂಡು ಬಂದ ಮ್ಯಾಲೆ ಅದು ನನ್ನ ಕರ್ತವ್ಯ. ಸಂಸಾರ ಸಾಗಿಸಿ ನಾಕು ಮಂದಿವಳಗ ಸೈ ಅನಿಸಿಗೊಬೇಕಲಪಾ. ಅಚ್ಚುತ ಭಾವಜಿದು ಸಂಸಾರ ಇದ್ದರ ಪೂರ್ಣಾಗಿರ್ತಿತ್ತು' ಎನ್ನುತ್ತ ಮತ್ತೆ ಕಣ್ಣ ಹನಿಗಳನ್ನು ತೊಡೆದರು. ಅಷ್ಟರಲ್ಲೇ 'ನಮಸ್ಕಾರಕ್ಕ ರ್ರಿ' ಎಂಬ ಕೂಗು ಕೇಳಿ ಬಂದಿತ್ತು. ನಾನೂ ಹೋಗಿ ಅಚ್ಚುತನ ಹೆಸರಲ್ಲೂ ನಮಸ್ಕಾರ ಮಾಡಿದೆ. 'ಕರ್ತಾ... ಮಾಡಿದವರೆಲ್ಲಾ ಒಳಗಿನ ರೂಮಿಗೆ ಹೋಗಿ ಊಟಕ್ಕ ಕೂಡ್ರಿ. ನೇವಿದ್ಯಾ ಮನಿಯಾವ್ರಿಗಷ್ಟ ಬಡಸ್ರಿ.

